ಪರಿಣಾಮವಾಗಿಲ್ಲ. ಈಗ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದೆ. ಆ ದೃಷ್ಟಿಯಿಂದ ಹೇಳುತ್ತೇನೆ. ತಾವು ಕೊಟ್ಟಿರತಕ್ಕ ಅಂಕಿ ಅಂಶಗಳ ಬಗ್ಗೆಯೂ ಕೂಡ ನಾವು 5-6 ಜನ ಸೇರಿ ಚರ್ಚೆ ಮಾಡಿ ವಿಷಯ ಸಂಗ್ರಹಣೆ ಮಾಡುತ್ತೇವೆ. ತಾವು 21ನೇ ತಾರೀಖಿನವರೆಗೂ ಪೆಂಡಿಂಗ್ ಇರುವುದಾದರೆ, I don't press for it right today.

ಅಧ್ಯಕ್ಷರು : ನೀವು ಬೇರೆ ನೋಟೀಸ್ ಕೊಡಬೇಕು. ಏಕೆಂದರೆ, ಅವರ ಸ್ಟೇಟ್‌ಮೆಂಟ್ ಮೇಲೆ ಈ ಚರ್ಚೆ ನಡೆದಿದೆ. 301 ಪ್ರಕಾರ ಬೇರೆ ಸಬ್‌ಸ್ಟ್ಯಾನ್‌ಷಿಯಲ್ ಮೋಷನ್ ಕಳುಹಿಸಿಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು, ನಾನು ಕಳುಹಿಸಿಕೊಡುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಶ್ರೀಮತಿ ಚಂದ್ರಪ್ರಭಾ ಅರಸ್(ಪುಣಸೂರು) : ಸನ್ಮಾನ್ಯ ಅಧ್ಯಕ್ಷರೇ, " ಮಾರ್ಚ್ 1.1991ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಶ್ರೀ ಪ್ರಭಾಕರ ಎಸ್.ರಾಣೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮತಿ ಚಂದ್ರಪ್ರಭಾ ಅರಸುರವರು ಮಂಡಿಸಿರುವ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ವಂದನಾ ನಿರ್ಣಯದ ಪ್ರಸ್ತಾಪವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವನ್ನು ಮಂಡಿಸಲಾಯಿತು.

ಶ್ರೀಮತಿ ಚಂದ್ರಪ್ರಭಾ ಅರಸ್ : (ಪುಣಸೂರು) : ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ, ವಂದನಾ ನಿರ್ಣಯವನ್ನು ಮಂಡಿಸಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೆನೆ. ನಾಳೆ ದಿವಸ ನನಗೆ ಹೆಚ್ಚಿನ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಸಭೆ ಮಂದುವರೆಯಿ, ನಾಳೆ ಬೆಳಿಗ್ಗೆ 11 ಗಂಟೆಗೆ ಸಮಾವೇಶವಾಗುತ್ತದೆ.

(ಸದನವು, ಸಂಜೆ 7 ಗಂಟೆಗೆ ಮುಕ್ತಾಯವಾಗಿ, ಮತ್ತೆ ದಿನಾಂಕ : 6-3-91 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)